

ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕಿಯಾಗಿ ನೇಮಕಗೊಳ್ಳುವ ಮೂಲಕ ಸುದ್ದಿಯಲ್ಲಿರುವ ರೇಣುಕಾ ಪೂಜಾರಿ, ಟ್ರಾನ್ಸ್‌ಜೆಂಡರ್ ಸಮುದಾಯದಲ್ಲಿನ ಬೆಳ್ಳಿಚುಕ್ಕಿ. 'ಸುಧಾ' ಜೊತೆ ಅವರು ತಮ್ಮ ಬದುಕು ಮತ್ತು ಕನಸುಗಳ ಕುರಿತು ಮಾತನಾಡಿದ್ದಾರೆ.

■ ರಾಘವೇಂದ್ರ ಕೆ. ತೊಗರ್ಸಿ

# ಜೀವನ ಸಂಕ್ರಾಂತಿಯಲ್ಲಿ ದೃಢಗೊಂಡ ಬದುಕು–ವ್ಯಕ್ತಿತ್ವ

**◆ ನಿಮ್ಮ ಪೂರ್ವಾಶ್ರಮದ ಬದುಕು ಹೇಗಿತ್ತು? ಈಗ ಹೇಗಿದೆ?**

ಬಳ್ಳಾರಿ ಜಿಲ್ಲೆಯ ಕುರುಗೋಡು ನಮ್ಮೂರು. ಅಪ್ಪ ಮಲ್ಲಯ್ಯ ಪೂಜಾರಿ, ಅವ್ವ ತಿಪ್ಪಮ್ಮ. ಟ್ರಾನ್ಸ್‌ಜೆಂಡರ್ ರೂಪ ಪಡೆದು ಒಂಬತ್ತು ವರ್ಷಗಳಾದವು. ಅದಕ್ಕಿಂತ ಮುಂಚೆ ದೈಹಿಕ ಚಹರೆ ಹುಡುಗನಂತೆಯೇ ಇತ್ತು. ಆಗ ಮಲ್ಲೇಶನಾಗಿದ್ದ ನನ್ನಲ್ಲಿ ಹೆಣ್ಣಿನ ನಡವಳಿಕೆಯನ್ನು ಕಂಡು ತುಂಬಾ ಜನ ಹೀಯಾಳಿಸಿದ್ದಾರೆ. ಮುಂದೆ ನಾನು ಬದಲಾಗುತ್ತೇನೆ ಎನ್ನುವುದು ನಿಶ್ಚಿತವಾಗಿದ್ದರಿಂದ ಅವಮಾನಗಳಿಗೆ ತಲೆಕೆಡಿಸಿಕೊಳ್ಳಲಿಲ್ಲ. ನನ್ನ ಒಳಗನ್ನು ಅರಿತಿದ್ದರಿಂದ ಎಲ್ಲ ಅವಮಾನವನ್ನು ಎದುರಿಸಲು ಸಾಧ್ಯ ಆಯಿತು. ಅದು ನಮ್ಮಂತಹವರಿಗೆ ಅಗತ್ಯವಾಗಿ ಇರಬೇಕಾದ ಮನೋಸ್ಥೈರ್ಯ. ಜೋಗತಿಯ ದೀಕ್ಷೆ ತೆಗೆದುಕೊಳ್ಳುವ ಮೂಲಕ ತೃತೀಯ ಲಿಂಗಿಯಾಗಿ ಬದಲಾದೆ.

ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವೀಧರೆಯಾಗಿದ್ದೇನೆ. ಯುಜಿಸಿ ನಡೆಸುವ 'ರಾಷ್ಟ್ರೀಯ ಅರ್ಹತಾ ಪರೀಕ್ಷೆ' (ಎನ್‌ಇಟಿ) ತೆಗೆದುಕೊಂಡಾಗ ತೃತೀಯ ಲಿಂಗಿ ಎಂದು ನಮೂದಿಸಿ ಅರ್ಜಿ ಹಾಕಿದ್ದೆ. ಜಾತಿಯಿಂದ ನಾನು ಒಬಿಸಿ (2ಎ) ವರ್ಗಕ್ಕೆ ಸೇರಿದವಳು. ಫಲಿತಾಂಶದಲ್ಲಿ ಟ್ರಾನ್ಸ್‌ಜೆಂಡರ್ ಮೀಸಲಾತಿ ನೀಡಿಲ್ಲ. ಸುಪ್ರೀಂ ಕೋರ್ಟ್ ಆದೇಶವನ್ನು ಯುಜಿಸಿ ಪರಿಗಣಿಸಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪತ್ರಗಳನ್ನು ಬೇರೆ ಬೇರೆಯವರ ಕಡೆಯಿಂದ ಬರೆಸಿದೆ. ಪ್ರಧಾನಿ, ಕೇಂದ್ರ ಶಿಕ್ಷಣ ಸಚಿವರಿಗೆ ಪತ್ರ ಬರೆದರೂ ಪ್ರಯೋಜನ ಆಗಲಿಲ್ಲ. ಎರಡು ವರ್ಷ ತುಂಬ ಕಷ್ಟದಿಂದ ಹೋರಾಡಿದ್ದೇನೆ. 'ಎನ್‌ಇಟಿ' ಪರೀಕ್ಷೆಯಲ್ಲಿ 90 ಅಂಕಗಳನ್ನು ತೆಗೆದುಕೊಂಡಿದ್ದೆ. ತೃತೀಯ ಲಿಂಗಿ ಎಂದು ಪರಿಗಣಿಸಿದ್ದರೆ ಯುಜಿಸಿ ಅರ್ಹತಾ ಪರೀಕ್ಷೆ ಪಾಸಾದಂತೆ ಆಗುತ್ತಿತ್ತು. ಒಬಿಸಿ, ಎಸ್‌ಸಿ, ಎಸ್‌ಟಿ, ಅಂಗವಿಕಲರಿಗೆ ಪ್ರತ್ಯೇಕ ಮೀಸಲು ಕಲ್ಪಿಸಿ ಫಲಿತಾಂಶ ನೀಡಿದ್ದಾರೆ. ಅದರಂತೆ ನಮಗೂ ಕೊಡಬೇಕು ಎನ್ನುವುದು ನನ್ನ ಆಗ್ರಹ ಆಗಿತ್ತು. ಇದುವರೆಗೆ ನ್ಯಾಯ ಸಿಕ್ಕಿಲ್ಲ. ಆ ಹೋರಾಟ ಇನ್ನೂ ಜೀವಂತವಾಗಿದೆ. ಸದ್ಯ ಕೆ.ಸೆಟ್ ಪಾಸಾಗಿದ್ದೇನೆ. ಶ್ರೀಕೃಷ್ಣದೇವರಾಯ ವಿ.ವಿ.ಯ ನಂದಿಹಳ್ಳಿ